ಹಂಪಿ ಟೈಮ್ಸ್
HAMPI TIMES




## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ಕ್ರೋಧಿ

**08-05-2024-ಬುಧವಾರ**

| | |
|---|---|
| ತಿಥಿ | : ಅಮಾವಾಸ್ಯೆ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಭರಣಿ |
| ಯೋಗ | : ಸೌಭಾಗ್ಯ |
| ಕರಣ | : ನಾಗವ |
| ಸೂರ್ಯೋದಯ | : 05:50:27 |
| ಸೂರ್ಯಾಸ್ತ | : 18:56:38 |
| ರಾಹು | : 12:24-14:02 |
| ಯಮಘಂಡ | : 07:29-09:07 |
| ಗುಳಿಕ | : 10:45-12:24 |

## ತುಂಗಭದ್ರಾ ನೀರಿನ ಮಟ್ಟ



**ಮಂಗಳವಾರ : 07-05-2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1577.79 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 138 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.489 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1575.54 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 235 ಕ್ಯುಸೆಕ್ |
| ಸಾಮರ್ಥ್ಯ | 2.672 ಟಿಎಂಸಿ |

## ಲೋಕ ಕಲ್ಯಾಣಕ್ಕೆ ಮತದಾನ



ಬಳ್ಳಾರಿ ಜಿಲ್ಲಾಧಿಕಾರಿ ಪ್ರಶಾಂತ ಕುಮಾರ ಮಿಶ್ರಾ ಮತದಾನದ ಹಕ್ಕನ್ನು ಚಲಾಯಿಸಿದರು.



ಹಗರಿಬೊಮ್ಮನಹಳ್ಳಿ ಕ್ಷೇತ್ರದ ಮಾಜಿ ಶಾಸಕ ಎಸ್.ಭೀಮಾನಾಯ್ಕ್ ತಾಲೂಕಿನ ಅಡವಿ ಆನಂದ ದೇವನಹಳ್ಳಿಯ ಮತಗಟ್ಟೆ ಕೇಂದ್ರಕ್ಕೆ ತೆರಳಿ ಮತದಾನ ಹಕ್ಕು ಚಲಾಯಿಸಿದರು.



ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ಪಟ್ಟಣದ ಮತಗಟ್ಟೆ ಸಂಖ್ಯೆ 60ರಲ್ಲಿ ತೃತೀಯ ಲಿಂಗಿಗಳಾದ ಪದ್ಮಶ್ರೀ ಪುರಸ್ಕೃತೆ ಮಾತಾ ಮಂಜಮ್ಮ ಜೋಗತಿ ಹಾಗೂ ಕಲಾವಿದೆ ಭಾಗ್ಯಮ್ಮ ಮತದಾನದ ಹಕ್ಕನ್ನು ಚಲಾಯಿಸಿದರು.

### 2019ರಲ್ಲಿ ಶೇ.69.59 । 2024ರಲ್ಲಿ ಶೇ.73.59 ಮತದಾನ

# ಗರಿಗೆದರಿದ ಲೆಕ್ಕಾಚಾರ

## ಜಿಲ್ಲಾ ಕೇಂದ್ರದಲ್ಲೆ ಮತದಾನ ಕುಸಿತ

**ಬಳ್ಳಾರಿ ನಗರ: ಶೇ. 65.12, ಕಂಪ್ಲಿ : ಶೇ. 78.98 । ವಿಜಯನಗರ: ಶೇ.70.33, ಹ.ಬೊ.ಹಳ್ಳಿ ಶೇ. 77.98**





■ **ಹಂಪಿ ಟೈಮ್ಸ್ ಬಳ್ಳಾರಿ**

ಲೋಕಸಭೆ ಚುನಾವಣೆಗೆ ಸಂಬಂಧಿಸಿದಂತೆ, ಬಳ್ಳಾರಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯ 08 ವಿಧಾನಸಭಾ (ವಿಜಯನಗರ ಜಿಲ್ಲೆ ಒಳಗೊಂಡಂತೆ) ಕ್ಷೇತ್ರಗಳ 1,972 ಮತಗಟ್ಟೆಗಳಲ್ಲಿ ಮೇ 07 ಮಂಗಳವಾರದಂದು ಸುಸೂತ್ರ ಹಾಗೂ ಶಾಂತಿಯುತ ಮತದಾನ ನಡೆದಿದ್ದು, ಒಟ್ಟು ಶೇ.73.59 ರಷ್ಟು ಮತದಾನ ಪ್ರಮಾಣವಾಗಿದೆ.

ಬಳ್ಳಾರಿ ಗ್ರಾಮೀಣ - ಶೇ.72.08, ಬಳ್ಳಾರಿ ನಗರ - ಶೇ. 65.12, ಹೂವಿನಹಡಗಲಿ - ಶೇ.75.05, ಹಗರಿಬೊಮ್ಮನಹಳ್ಳಿ- ಶೇ.77.98, ಕಂಪ್ಲಿ - ಶೇ.78.91, ಕೂಡ್ಲಿಗಿ - ಶೇ.76.58, ಸಂಡೂರು - ಶೇ. 75.27, ವಿಜಯನಗರ - ಶೇ.70.33 ರಷ್ಟು ಮತದಾನವಾಗಿದೆ.

**ಮತದಾನ ವಿವರ:**

ಬಳ್ಳಾರಿ ಲೋಕಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 18,84,040 ಮತದಾರರಿದ್ದು, ಅದರಲ್ಲಿ 13,86,520 ಮತದಾರರು ತಮ್ಮ ಮತದ ಹಕ್ಕನ್ನು ಚಲಾಯಿಸಿದ್ದಾರೆ.

928857 ಪುರುಷ ಮತದಾರರಲ್ಲಿ 697349 ಪುರುಷರು (ಶೇ.75.08) ಮತ ಚಲಾಯಿಸಿದ್ದಾರೆ. 954914 ಮಹಿಳಾ ಮತದಾರರಲ್ಲಿ 689056 ಮಹಿಳೆಯರು (ಶೇ.72.16) ಮತದಾನ ಮಾಡಿದ್ದಾರೆ ಮತ್ತು 269 ಅಲ್ಪಸಂಖ್ಯಾತ ಮತದಾರರಲ್ಲಿ 115 ಮಂದಿ (ಶೇ.42.75) ಮತದಾನ ಮಾಡಿದ್ದಾರೆ.

ಜಿಲ್ಲೆಯಲ್ಲಿನ ಬಿರು ಬಿಸಿಲಿನ ತಾಪದ ಅರಿವಿದ್ದ ಮತದಾರರು ಮುಂಜಾನೆಯ ತಂಪು ಹೊತ್ತಿನಲ್ಲಿಯೇ ಹೋಗಿ ಮತ ಚಲಾಯಿಸಿಬಿಡೋಣ ಎಂಬ ಧಾವಂತದಲ್ಲಿ ಇದ್ದಿದ್ದು ಕಂಡುಬಂದಿತು. ಹೀಗಾಗಿ ಬೆಳಿಗ್ಗೆ 7 ಗಂಟೆಯಿಂದಲೇ ಮತದಾರರು ಮತಗಟ್ಟೆಗಳತ್ತ ಧಾವಿಸಿ, ಸರದಿ ಸಾಲಿನಲ್ಲಿ ನಿಂತು ಮತ ಚಲಾಯಿಸಿದ್ದು ಕಂಡುಬಂದಿತು. ಚುನಾವಣಾ ಆಯೋಗದ ನಿಯಮದಂತೆ ಬೆಳಿಗ್ಗೆ 07 ಗಂಟೆಗೆ ಜಿಲ್ಲೆಯಾದ್ಯಂತ ಪ್ರಾರಂಭಗೊಂಡ ಮತದಾನ, ಆರಂಭದಲ್ಲಿ ಬಿರುಸಿನಿಂದ ಜರುಗಿತು. ಸೂರ್ಯ ನೆತ್ತಿಯ ಮೇಲೆ ಏರುತ್ತಿದ್ದಂತೆಯೇ ಮಧ್ಯಾಹ್ನದ ವೇಳೆಗೆ ಸ್ವಲ್ಪ ಮಂದಗತಿಯಲ್ಲಿ ಸಾಗಿದ ಮತದಾನ, ನಂತರ ಸಂಜೆ ವೇಳೆಗೆ ಇನ್ನಷ್ಟು ಬಿರುಸಿನಿಂದ ಸಾಗಿತು. ಮತದಾರರನ್ನು ಆಕರ್ಷಿಸಲು ಬಳ್ಳಾರಿ ಜಿಲ್ಲೆಯ 4 ಕ್ಷೇತ್ರಗಳಲ್ಲಿ ಜಿಲ್ಲಾಡಳಿತದಿಂದ ವಿಭಿನ್ನ ಪರಿಕಲ್ಪನೆಯ ಮತಗಟ್ಟೆಗಳನ್ನು ತೆರೆಯಲಾಗಿತ್ತು. ಸಖಿ ಮತಗಟ್ಟೆ, ಯುವ ಮತಗಟ್ಟೆ, ವಿಕಲಚೇತನ ಮತಗಟ್ಟೆ, ಸಾಂಪ್ರದಾಯಿಕ ಮತ್ತು ವಿಷಯಾಧಾರಿತ ಮತಗಟ್ಟೆಗಳು ಆಕರ್ಷಕವಾಗಿದ್ದು, ಮತದಾರರನ್ನು ತನ್ನತ್ತ ಸೆಳೆಯುತ್ತಿದ್ದಂತೆ ಕಂಡುಬಂದಿತು.

ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 1,219 ಮತಗಟ್ಟೆ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. ಕಂಪ್ಲಿ-242, ಸಿರುಗುಪ್ಪ-228, ಬಳ್ಳಾರಿ ಗ್ರಾಮೀಣ-235, ಬಳ್ಳಾರಿ ನಗರ-261 ಹಾಗೂ ಸಂಡೂರು ಕ್ಷೇತ್ರದ 253 ಮತಗಟ್ಟೆಗಳಲ್ಲಿ ಮತದಾನವು ಬಹುತೇಕ ಸುಸೂತ್ರ ಹಾಗೂ ಶಾಂತಿಯುತವಾಗಿ ನಡೆಯಿತು.





**ಬಳ್ಳಾರಿ ಲೋಕಸಭಾ ಕ್ಷೇತ್ರದಲ್ಲಿ ನಡೆದ ಶೇಕಡಾವಾರು ಮತದಾನ ಪ್ರಮಾಣ ವಿವರ**

ಬೆಳಿಗ್ಗೆ 07 ಗಂಟೆಗೆ ಪ್ರಾರಂಭಗೊಂಡ ಮತದಾನ ಬೆ. 9 ಗಂಟೆಯವರೆಗೆ ಒಟ್ಟು ಶೇ.10.37 ಮತದಾನ ಪ್ರಮಾಣವಾಗಿದ್ದು, ಬಳ್ಳಾರಿ ಗ್ರಾಮೀಣ-ಶೇ.11.06, ಬಳ್ಳಾರಿ ನಗರ-ಶೇ.10.43, ಹೂವಿನಹಡಗಲಿ-ಶೇ.6.60, ಹಗರಿಬೊಮ್ಮನಹಳ್ಳಿ- ಶೇ.9.24, ಕಂಪ್ಲಿ - ಶೇ.13.06, ಕೂಡ್ಲಿಗಿ - ಶೇ.10.09, ಸಂಡೂರು - ಶೇ.9.91, ವಿಜಯನಗರ - ಶೇ.11.83 ರಷ್ಟು ಮತದಾನವಾಯಿತು.

ಬೆಳಿಗ್ಗೆ 11 ಗಂಟೆಯ ವೇಳೆಗೆ ಒಟ್ಟು ಶೇ.26.45 ಮತದಾನ ಪ್ರಮಾಣವಾಗಿದ್ದು, ಬಳ್ಳಾರಿ ಗ್ರಾಮೀಣ - ಶೇ.27.16, ಬಳ್ಳಾರಿ ನಗರ - ಶೇ.25.54, ಹೂವಿನಹಡಗಲಿ - ಶೇ.21.29, ಹಗರಿ ಬೊಮ್ಮನಹಳ್ಳಿ- ಶೇ.24.21, ಕಂಪ್ಲಿ - ಶೇ.31.53, ಕೂಡ್ಲಿಗಿ - ಶೇ.27.93, ಸಂಡೂರು - ಶೇ.25.70, ವಿಜಯನಗರ - ಶೇ.27.79 ರಷ್ಟು ಮತದಾನವಾಗಿದೆ.

ಮಧ್ಯಾಹ್ನ 01 ಗಂಟೆಯವರೆಗೆ ಒಟ್ಟು ಶೇ.44.36 ಮತದಾನ ಪ್ರಮಾಣವಾಗಿದ್ದು, ಬಳ್ಳಾರಿ ಗ್ರಾಮೀಣ - ಶೇ.44.05, ಬಳ್ಳಾರಿ ನಗರ - ಶೇ.40.98, ಹೂವಿನಹಡಗಲಿ - ಶೇ.40.30, ಹಗರಿ ಬೊಮ್ಮನಹಳ್ಳಿ- ಶೇ.43.34, ಕಂಪ್ಲಿ - ಶೇ.50.46, ಕೂಡ್ಲಿಗಿ - ಶೇ.47.46, ಸಂಡೂರು - ಶೇ.44.56, ವಿಜಯನಗರ - ಶೇ.44.28 ರಷ್ಟು ಮತದಾನವಾಗಿದೆ.

ಮಧ್ಯಾಹ್ನ 03 ಗಂಟೆಯವರೆಗೆ ಒಟ್ಟು ಶೇ.56.76 ಮತದಾನ ಪ್ರಮಾಣವಾಗಿದ್ದು, ಬಳ್ಳಾರಿ ಗ್ರಾಮೀಣ - ಶೇ.55.36, ಬಳ್ಳಾರಿ ನಗರ - ಶೇ.50.77, ಹೂವಿನಹಡಗಲಿ - ಶೇ.56.56, ಹಗರಿ ಬೊಮ್ಮನಹಳ್ಳಿ- ಶೇ.58.16, ಕಂಪ್ಲಿ - ಶೇ.63.03, ಕೂಡ್ಲಿಗಿ - ಶೇ.60.63, ಸಂಡೂರು - ಶೇ.56.97, ವಿಜಯನಗರ - ಶೇ.54.57 ರಷ್ಟು ಮತದಾನವಾಗಿದೆ.

ಸಂಜೆ 05 ಗಂಟೆಯವರೆಗೆ ಒಟ್ಟು ಶೇ.68.94 ಮತದಾನ ಪ್ರಮಾಣವಾಗಿದ್ದು, ಬಳ್ಳಾರಿ ಗ್ರಾಮೀಣ - ಶೇ.67.53, ಬಳ್ಳಾರಿ ನಗರ - ಶೇ.60.33, ಹೂವಿನಹಡಗಲಿ - ಶೇ.70.72, ಹಗರಿ ಬೊಮ್ಮನಹಳ್ಳಿ- ಶೇ.72.12, ಕಂಪ್ಲಿ - ಶೇ.74.61, ಕೂಡ್ಲಿಗಿ - ಶೇ.73.29, ಸಂಡೂರು - ಶೇ.70.09, ವಿಜಯನಗರ-ಶೇ.65.61ರಷ್ಟುಮತದಾನವಾಗಿದೆ.

ಕಳೆದ ಬಾರಿ 2019 ರಲ್ಲಿ ಲೋಕಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಗೆಯ ಹಡಗಲಿ ಕ್ಷೇತ್ರದಲ್ಲಿ ಶೇ.71.45, ಹಗರಿಬೊಮ್ಮನಹಳ್ಳಿ ಕ್ಷೇತ್ರ-ಶೇ.73.37, ವಿಜಯನಗರ-ಶೇ.68.59, ಕಂಪ್ಲಿ-ಶೇ.70.72, ಬಳ್ಳಾರಿ ಗ್ರಾಮೀಣ-ಶೇ.70.12, ಬಳ್ಳಾರಿ ನಗರ-ಶೇ.63.05, ಸಂಡೂರು-ಶೇ.71.16 ಮತ್ತು ಕೂಡ್ಲಿಗಿ ವಿಧಾನಸಭಾ ಕ್ಷೇತ್ರದಲ್ಲಿ ಶೇ.69.22 ರಷ್ಟು ಅಂದರೆ ಒಟ್ಟಾರೆ ಬಳ್ಳಾರಿ ಲೋಕಸಭೆ ಕ್ಷೇತ್ರದಲ್ಲಿ ಶೇ.69.59 ರಷ್ಟು ಮತದಾನವಾಗಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಅಲ್ಲದೆ ಈ ಹಿಂದಿನ ಬಳ್ಳಾರಿ ಲೋಕಸಭಾ ಕ್ಷೇತ್ರದ ಚುನಾವಣೆಗಳನ್ನು ಅವಲೋಕಿಸಿದಾಗ 2019 ರಲ್ಲಿ ಶೇ. 69.59, 2014 (ಉಪಚುನಾವಣೆ)- ಶೇ. 61.12, 2014-ಶೇ. 69.53 ಹಾಗೂ 2009 ರ ಚುನಾವಣೆಯಲ್ಲಿ ಶೇ. 61.43 ರಷ್ಟು ಮತದಾನವಾಗಿರುವುದು ದಾಖಲಾಗಿದೆ.







## ಸಮೃದ್ಧ ರಾಷ್ಟ್ರ ನಿರ್ಮಾಣಕ್ಕಾಗಿ ಮತದಾನ

■ **ಹಂಪಿ ಟೈಮ್ಸ್ ಹರಪನಹಳ್ಳಿ:**

ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹರಪನಹಳ್ಳಿಗೆ ಮಾಜಿ ಕಂದಾಯ ಸಚಿವ ಜಿ ಕರುಣಾಕರ ರೆಡ್ಡಿ ಹರಪನಹಳ್ಳಿ ಪಟ್ಟಣದ ಬಾಪೂಜಿ ನಗರದ ಐದನೇ ವಾರ್ಡ್ ಸರ್ಕಾರಿ ಶಾಲೆಯಲ್ಲಿ ಕುಟುಂಬ ಸಮೇತರಾಗಿ ಮತದಾನ ಮಾಡಿ ಮಾತನಾಡಿ, ಸದೃಢ ಭಾರತ, ವಿಕಸಿತ ಭಾರತ ಸಮೃದ್ಧ ರಾಷ್ಟ್ರದ ಗುರಿಯೊಂದಿಗೆ ದೇಶವನ್ನು ಮುನ್ನಡೆಸಲು ಎಲ್ಲರೂ ತಪ್ಪದೆ ಮತದಾನ ಮಾಡಬೇಕು ಎಂದು ಹೇಳಿದರು.

## ಮತದಾನದ ಚಿತ್ರಾವಳಿ



ಕವಿತಾ ಈಶ್ವರಸಿಂಗ್ ಪತಿಯೊಂದಿಗೆ ಮತದಾನ ಮಾಡಿದರು



ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿರಾಜ್‌ಶೇಕ್ ಮತದಾನ ಮಾಡಿದರು



ವಿಜಯನಗರ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಿ.ಚನ್ನಬಸವನಗೌಡ (86) ಅವರು ತಮ್ಮ ಹಳೇ ವಿದ್ಯಾರ್ಥಿ ವಕೀಲ ಪುಂಡಲೀಕ ಪ್ರಭು ಜೊತೆ ಹೊಸಪೇಟೆ ಮೊದಲಿಯಾರ್ ತಾಂಡ ಸರ್ಕಾರಿ ಶಾಲೆಯ ಮತಗಟ್ಟೆಗೆ ಆಗಮಿಸಿ ಮತ ಚಲಾಯಿಸಿದರು.



ಶಾಸಕ ಕೆ.ನೇಮಿರಾಜ್ ನಾಯ್ಕ್ ಮರಿಯಮ್ಮನಹಳ್ಳಿ ತಾಂಡದ ಮತಗಟ್ಟೆಗೆ ಕುಟುಂಬ ಸಮೇತ ತೆರಳಿ ಮತದಾನದ ಹಕ್ಕು ಚಲಾಯಿಸಿದರು.

## ಹಕ್ಕು ಚಲಾಯಿಸಿದ ಯುವ ಮತದಾರರು



ಚೆಸ್ ಆಟಗಾರ, ಬಿ.ಇ. ವಿದ್ಯಾರ್ಥಿ ಬಿ.ಸುಹಾಸ್, ಹೊಸಪೇಟೆ



ವಿದ್ಯಾರ್ಥಿಗಳಾದ ಬಿ.ಜೆ.ದಯಾನಂದ, ಬಿ.ಜೆ.ವಿಕಾಸಗೌಡ ಹೊಸಪೇಟೆ



ಬಿ.ಪಂಪಾಪತಿ, ಹೊಸಪೇಟೆ



ದೀಪಶ್ರೀ ಎಸ್. ಕೂಡ್ಲಿಗಿ, ಬರಹಗಾರ್ತಿ










Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA